365

1359

ಮೈಸೂರ ಗೆಜಿಟ್ಟಿಂ

ಸಂ. 39.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 1, ಸನ್ 1904.

IIನೆ ಬಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ಸನ್ 1904ನೆ ಇಸವಿ ಆಗಸ್ಟು 5ನೆ ತಾರೀಖಿನ ರೂಲ್ ಆಫ್ ಪ್ರಾಕ್ಟೀಸ್ ನಂಬರು 73.

ಕ್ರಿ. ಪ್ರೊ. ಕೋ. 553ನೆ ಸೆಕ್ಷನ್ ಪ್ರಕಾರ ಚೀಫ್ ಕೋರ್ಟ್‌ನವರು, ಗವರ್ನ್‌ಮೆಂಟ್‌ನವರ ಒಪ್ಪಿಕೆಯಿಂದ ಈ ಕೆಳಗೆ ನಮೂದಿಸಿರುವ ರೂಲ್ ಅನ್ನು ವಿಧಿಸಿದ್ದಾರೆ:—

ಒಬ್ಬ ಪ್ರೈವೇಟ್ ಆಸಾಮಿಯು (Private person,) ಸಿವಿಲ್-ಆ ಕ್ರಿಮಿನಲ್ ಪ್ರೊಸೀಡಿಂಗ್ಸು ಅಥವಾ ಇನ್ಯಾವ ವಿಷಯ ಕ್ಕಾಗಲೀ, ಗವರ್ನ್‌ಮೆಂಟ್ಟು, ಮ್ಯುನಿಸಿಪಲ್ ಅಥವಾ ಲೋಕಲ್ ಫಂಡು ಸರ್ವಿಸ್ಸಿನಲ್ಲಿರುವ ಒಬ್ಬ ಮೆಡಿಕಲ್ ಆಫಿಸರಿಂದ ಸರ್ಟಿಫಿಕೇಟಿ, ಅಥವಾ ಅವರ ಅಭಿಪ್ರಾಯ ಅಥವಾ ಸಾಕ್ಷ್ಯವನ್ನು ಕೊಡಬೇಕೆಂದು ಅಪೇಕ್ಷಿಸಿದ ಪಕ್ಷದಲ್ಲಿ, ಸದರೀ ಮೆಡಿಕಲ್ ಆಫಿಸರಿಗೆ ಅವರ ಅಲೌವೆನನ್ನು ವಿನಹಾ ಅವರಿಗೆ ಸಲ್ಲುವ ಎರಡು ದಿವಸಗಳ ತಲುಬಿಗೆ ಹೆಚ್ಚ್‌ದಂತೆ ಮತ್ತು 5 ರೂಪಾಯಿಗಳಿಗೆ ವಿುರದೆ ಫೀಜು ಕೊಡ ಬೇಕೆಂತಲೂ ಮತ್ತು ಸದರಿ ಆಸಾಮಿಯು ಸರ್ಕಾರಿ ಅಥವಾ ಮ್ಯುನಿಸಿಪಲ್ ಅಥವಾ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಇಲಾಜು ಹೊಂದಿದ ಮಾತ್ರದಿಂದಲೆ ಮೇಲ್ಕಂಡ ರುಸುಂನಿಂದ ವಿನಾಯಿತಿ ಹೊಂದಲು ಅರ್ಹನಲ್ಲವೆಂತಲೂ, ಗವರ್ನ್‌ಮೆಂಟ್‌ನವರು ಸನ್ 1904ನೆ ಫೆಬ್ರುವರಿ 11ನೆ ಮಾರ್ಕುಮ್ಮಿನ 3989 – 4038ನೆ ಪ್ರೊಸೀಡಿಂಗ್ಸ್‌ನ್ನು ಮಾಡಿರುತ್ತಾರಾಗಿ, ಒಬ್ಬ ಪ್ರೈವೇಟ್ ಆಸಾಮಿಯು ಅಪೇಕ್ಷೆ ಮೇಲೆ, ಕ್ರಿಮಿನಲ್ ಕೋರ್ಟ್‌ನವರು ಒಬ್ಬ ಮೆಡಿಕಲ್ ಆಫಿಸರ ಸರ್ಟಿಫಿಕೇಟ್ ಅಥವಾ ಅಭಿಪ್ರಾಯವನ್ನು ಅಪೇಕ್ಷಿಸಿದಾಗ ಅಥವಾ ಸಾಕ್ಷ್ಯವನ್ನು ಕೊಡುವದಕ್ಕೆ ಅವರನ್ನು ಸಮ್ಮನ್ ಮೂಲಕ ಕರದಾಗ, ಅಂಥಾ ಆಸಾಮಿಯು, ತತ್ಪೂರ್ವದಲ್ಲಿಯೇ ಅವಶ್ಯಕ ವಾದ ಫೀಜನ್ನು ನಗದು ಡಿಪಾಜಿಟ್ ಇಡುವಹಾಗೆ ಹುಕುಂ ಮಾಡಬೇಕೆಂತಲೂ ಮತ್ತು ಈ ಪ್ರೊಬಲಗನ್ನು ಮೆಡಿಕಲ್ ಆಫಿಸರಿಗೆ, ಅವರು ಸರ್ಟಿಫಿಕೇಟ್, ಅಭಿಪ್ರಾಯ ಅಥವಾ ಸಾಕ್ಷ್ಯವನ್ನು ಕೊಟ್ಟನಂತರ, ಪಾವತಿ ಮಾಡುವಹಾಗ ಹುಕುಂ ಮಾಡಬೇಕೆಂತಲೂ, ಚೀಫ್ ಕೋರ್ಟ್‌ನವರು ಆಜ್ಞಾಪಿಸಿದ್ದಾರೆ.

ತಮ್ಮ ವಿಧೇಯ,
ವಿ. ಎ. ರಾಜರತ್ನ ಮೊದಲಿಯಾರ್, ರಿಜಿಸ್ಟ್ರಾರ್.